**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,**
**ಮಡಿಕೇರಿ-ಕೊಡಗು**

**Crl.A No. 125/2025**

**PW-1**

**ಸಾಕ್ಷಿಯನ್ನು ದಿನಾಂಕ 24-12-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ. ಆರ್.ಹೆಚ್.ಇ ವಕೀಲರಿಂದಃ</u>**

1. ನಾನು ದಿಃ 21-06-2022 ರಂದು ನನಗೆ ಜೀವನಾಂಶ ನೀಡಲೆಂದು ನನ್ನ ಗಂಡನಾದ ಯೋಗಾನಂದ ಡಿ.ವಿ ಈತನ ಮೇಲೆ ಅಪರ ಸಿವಿಲ್ ಜಡ್ಜ್ ಜೆ.ಎಂ.ಎಫ್.ಸಿ, ಮಡಿಕೇರಿ ಇಲ್ಲಿ ಕ್ರಿಮಿ ನಂಬರ್ 68/2022 ನ್ನು ಹೂಡಿದ್ದು, ಸದರಿ ಅರ್ಜಿ ಯನ್ನು ದಿಃ 13-01-2023 ರಂದು ನ್ಯಾಯಾಲಯವು ಪುರಸ್ಕರಿಸಿ ಪ್ರತಿ ತಿಂಗಳು ರೂ. 3,000/- ಮಾಸಿಕ ಜೀವನಾಂಶ ನೀಡುವಂತೆ ಆದೇಶಿಸಿರುತ್ತದೆ. ಅದರಂತೆ ಇನ್ನು ಹೆಚ್ಚಿನ ಜೀವನಾಂಶಕ್ಕಾಗಿ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಡಿಕೇರಿ ಇಲ್ಲಿ ಕ್ರಿಮಿನಲ್ ರಿವಿಷನ್ ಪಿಟಿಷನ್ ನಂಬರ್ 82/2023 ರಂತೆ ಪರಿಶೀಲನಾ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕೃತಗೊಂಡಿದ್ದು, ಸದರಿ ರೂ. 3,000/- ಜೀವನಾಂಶದ ಬದಲಿಗೆ ರೂ. 20,000/- ಮಾಸಿಕ ಕೊಡುವಂತೆ ನ್ಯಾಯಾಲಯವು ಆದೇಶಿಸಿತ್ತು. ತದನಂತರ ಎದುರುದಾರರಾದ ನನ್ನ ಗಂಡ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿಗೆ ಕ್ರಿಮಿನಲ್ ರಿವಿಷನ್ ಪಿಟಿಷನ್ ನಂಬರ್ 6/2024 ರಂತೆ ಪರಿಶೀಲನಾ

ಅರ್ಜಿ ಸಲ್ಲಿಸಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸದರಿ ಕ್ರಿಮಿನಲ್ ರಿವಿಷನ್ ಪಿಟಿಷನ್ ನಂಬರ್ 6/2024 ನ್ನು ಅನುರ್ಜಿತವೆಂದು ಅರ್ಜಿಯನ್ನು ತಿರಸ್ಕರಿಸಿರುತ್ತದೆ. ಆದ ಕಾರಣ ನಾನು ಕ್ರಿಮಿನಲ್ ಅಪೀಲ್ ಎಂಬಂತೆ ಸದರಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇನೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿ ಅಪೀಲು ಇರುವ ಸಂಗತಿ ನನಗೆ ಗೊತ್ತಿಲ್ಲದಿರುವ ಕಾರಣ ವಿಳಂಬವಾಗಿರುತ್ತದೆ. ಆದ್ದರಿಂದ ಸದರಿ ಮೇಲ್ಮನವಿ ಸಲ್ಲಿಸಲು 2 ವರ್ಷ 8 ತಿಂಗಳು 28 ದಿವಸಗಳ ಕಾಲ ವಿಳಂಬವಾಗಿರುತ್ತದೆ. ಆದ್ದರಿಂದ ಕಾಲ ವಿಳಂಬವನ್ನು ಮನ್ನಿಸಿ ಮೇಲ್ಮನವಿಯನ್ನು ಪುರಸ್ಕರಿಸುವಂತೆ ಕೋರುತ್ತೇನೆ.

**ಪಾಟೀಸವಾಲು- ಎದುರುದಾರರ ಪರ ಕು. ಕೆ.ಕೆ.ಎಸ್ ವಕೀಲರಿಂದಃ**

2. ನಾನು ವಿದ್ಯಾವಂತೆ ಎಂದರೆ ಸರಿ. ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಪರವಾಗಿ ಆದೇಶವಾಗಿರುತ್ತದೆ ಎಂದರೆ ಸರಿ. ನನ್ನ ಗಂಡ ಯೋಗಾನಂದ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಕ್ರಿಮಿನಲ್ ರಿವಿಷನ್ ಪಿಟಿಷನ್ ನಂಬರ್ 6/2024 ರಂತೆ ಅರ್ಜಿ ಸಲ್ಲಿಸಿದ್ದರು ಎಂಬ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ಸಂಗತಿ ತಿಳಿದಿದ್ದರೂ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. ಸದರಿ ಆದೇಶವು ದಿಃ 28-04-2024 ರಂದೇ ಆಗಿರುತ್ತದೆ, ಸದರಿ ಆದೇಶದ ವಿರುದ್ಧ ಮೇಲ್ಮನವಿ ಹೂಡಲು ಸಾಕಷ್ಟು ಕಾಲಾವಕಾಶ ಇರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ಹೂಡಲು ಸಾಕಷ್ಟು ಕಾಲಾವಕಾಶ ಇದ್ದರೂ ಸಹ ನನ್ನ ನಿರ್ಲಕ್ಷತೆಯಿಂದಲೇ 2

ವರ್ಷ 8 ತಿಂಗಳು 28 ದಿವಸಗಳ ಕಾಲ ತಡವಾಗಿ ಮೇಲ್ಮನವಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಈ ಕಾರಣವನ್ನು ಹೊರತಾಗಿ ವೈಯಕ್ತಿಕವಾಗಿ ಆಗಲೀ ಅನಾರೋಗ್ಯದ ಕಾರಣವಾಗಲೀ ಇರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.